## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮುನಿರಾಜುಗೌಡ ಪಿ.ಎಂ ರವರ ನಿಯಮ 72ರ ಗಮನ ಸೆಳೆಯುವ ಸೂಚನೆಗೆ ಉತ್ತರ

ಬೆಂಗಳೂರು ನಗರದಲ್ಲಿ ಜನತೆಗೆ ಇಲ್ಲಿಯವರೆಗೂ ಶಾಂತಿ, ನೆಮ್ಮದಿ ಮತ್ತು ಭದ್ರತೆಯ ವಾತಾವರಣವಿತ್ತು. ಆದರೆ ಇಂದು ಶಂಕಿತ ಉಗ್ರರ ಯೋಜಿಸಿದ್ದ ಸಂಚಿನ ಬಗ್ಗೆ ತಿಳಿದು ನಿಜಕ್ಕೂ ಜನತೆ ಆತಂಕಕ್ಕೊಳಗಾಗಿದ್ದಾರೆ. ಸಿಸಿಬಿ ಮತ್ತು ಕೇಂದ್ರ ಗುಪ್ತಚರ ಇಲಾಖೆಯ ಜಂಟಿ ಕಾರ್ಯಾಚರಣೆಯಿಂದ ದೊಡ್ಡ ಮಟ್ಟದ ಸ್ಫೋಟ ನಡೆಸಲು ಸಂಚು ರೂಪಿಸಿದ್ದ ಶಂಕಿತರ ಟೀಂ ಅನ್ನು ಬಂದಿಸಿದೆ, ಆದರೆ ಸದರಿ ಗುಂಪಿನ ಮಾಸ್ಟರ್ ಮೈಂಡ್ ಎಸ್ಕೇಪ್ ಆಗಿದ್ದಾನೆ. ಸದರಿ ಗುಂಪಿನ ವ್ಯಾಪ್ತಿಯು ದೇಶದ ಒಳಗೆ ಇತರೆ ರಾಜ್ಯ ಮತ್ತು ವಿದೇಶಕ್ಕೂ ವಿಸ್ತರಿಸಿರುವ ಕಾರಣಕ್ಕೆ ಇದರ ಬಗ್ಗೆ ಸೂಕ್ತ ತನಿಖೆ ಮಾಡಲು ಸದರಿ ಪ್ರಕರಣವನ್ನು ಎನ್.ಐ.ಎ ಗೆ ವರ್ಗಾಯಿಸಬೇಕು ಹಾಗೂ ಬೆಂಗಳೂರು ನಗರದಲ್ಲಿ ಜನ ನಿಬಿಡ ಸ್ಥಳಗಳಲ್ಲಿ ಭದ್ರತೆಯನ್ನು ಹೆಚ್ಚಿಸಬೇಕು.

ಶಂಕಿತ ಉಗ್ರರು ಈ ಹಿಂದೆ ಆರ್.ಟಿ ನಗರದ ರೌಡಿ ಶೀಟರ್‌ಗಳಾಗಿದ್ದು, ಕರೋನಾ ಸಮಯದಲ್ಲಿ ಕೊಲೆ ಕೇಸ್‌ನಲ್ಲಿ ಬಂದಿತರಾಗಿದ್ದು, ಜೈಲಿನಲ್ಲಿದ್ದಾಗ ಉಗ್ರರ ಪರಿಚಯವಾಗಿ, ಅವರಿಂದ ತರಬೇತಿ ಪಡೆದಿರುತ್ತಾರೆ. ಆದ್ದರಿಂದ ಈ ರೀತಿಯ ಉಗ್ರಗಾಮಿಗಳು ಹಾಗೂ ಶಂಕಿತ ಉಗ್ರಗಾಮಿಗಳನ್ನು ಇತರೆ ಆರೋಪಿ/ಅಪರಾಧಿಗಳು ಇರುವ ಜೈಲಿನಲ್ಲಿ ಇಡಬಾರದು ಇವರನ್ನು ಪ್ರತ್ಯೇಕವಾದ ಬಂಧೀಖಾನೆಯಲ್ಲಿ ಇಡಬೇಕು ಎಂಬುದರ ಕುರಿತು.

### ಉತ್ತರ:

- ಬೆಂಗಳೂರು ನಗರ ಸಿಸಿಬಿ ಅಧಿಕಾರಿಗಳು ಖಚಿತ ಮಾಹಿತಿ ಮೇರೆಗೆ ಕೆಲವು ಹಳೆ ಚಾಳಿ ಬಿದ್ದ ಆರೋಪಿಗಳು, ಜೈಲಿನಲ್ಲಿರುವ ಭಯೋತ್ಪಾದಕ ಕೃತ್ಯದಲ್ಲಿ ಭಾಗಿಯಾಗಿರುವ ಆರೋಪಿಗಳೊಂದಿಗೆ ಸಂಪರ್ಕ ಹೊಂದಿ, ನಗರದಲ್ಲಿ ದೇಶವಿರೋದಿ ಕಾನೂನುಬಾಹಿರ ವಿಧ್ವಂಸಕ ಕೃತ್ಯವೆಸಗಲು ಹಲವಾರು ಒಳಸಂಚಿನ ಸಭೆಗಳನ್ನು ನಡೆಸಿ, ಈ ಕಾರ್ಯಸಾಧನೆಗಾಗಿ ಕೆಲವು ವಾರಗಳಿಂದ ಅಕ್ರಮವಾಗಿ ಶಸ್ತ್ರಾಸ್ತ್ರ, ಮದ್ದುಗುಂಡುಗಳು ಮತ್ತು ದುಷ್ಕೃತ್ಯಕ್ಕೆ ಬೇಕಾಗುವ ವಸ್ತುಗಳನ್ನು ಕ್ರೋಢೀಕರಿಸಿಕೊಂಡು ದೇಶದ ಐಕ್ಯತೆ, ಭದ್ರತೆ ಮತ್ತು ಸಾರ್ವಭೌಮತ್ವಕ್ಕೆ ಧಕ್ಕೆ ಉಂಟು ಮಾಡುವ ಉದ್ದೇಶದಿಂದ ಸಾರ್ವಜನಿಕ ಆಸ್ತಿ ಪಾಸ್ತಿಗೆ ನಷ್ಟ ಉಂಟು ಮಾಡಲು ದುಷ್ಕೃತ್ಯಗಳನ್ನೆಸಗಲು ಹೆಬ್ಬಾಳ ಪೊಲೀಸ್ ಠಾಣಾ ವ್ಯಾಪ್ತಿಯ ಸುಲ್ತಾನ್‌ಪಾಳ್ಯದ ಮನೆಯೊಂದರಲ್ಲಿ ದೇಶವಿರೋಧಿ ಭಯೋತ್ಪಾದಕ ಕೃತ್ಯದ ರೂಪುರೇಷೆಗಳ ಬಗ್ಗೆ ಅಕ್ರಮ ಶಸ್ತ್ರಾಸ್ತ್ರದೊಂದಿಗೆ ವಿಧ್ವಂಸಕ ಕೃತ್ಯಕ್ಕೆ ಒಳಸಂಚು ಮಾಡುತ್ತಾ, ಕಾನೂನು ಬಾಹಿರವಾಗಿ ಚಟುವಟಿಕೆಗೆ ಸಂಚು ನಡೆಸಿದ್ದ ಖಚಿತ ಮಾಹಿತಿ ಮೇರೆಗೆ ದಿನಾಂಕ 18.07.2023 ರಂದು 05 ಜನ ಆರೋಪಿಗಳನ್ನು ದಸ್ತಗಿರಿ ಮಾಡಿ ಅವರುಗಳ ವಶದಿಂದ 07 ಕಂಟ್ರಿಮೇಡ್ ಪಿಸ್ತೂಲ್, 45 ರೌಂಡ್ಸ್, ಎರಡು ವಾಕಿಟಾಕಿ ಸೆಟ್, 12 ಮೊಬೈಲ್ ಫೋನ್‌ಗಳನ್ನು ಅಮಾನತ್ತುಪಡಿಸಿಕೊಂಡು ಹೆಬ್ಬಾಳ ಪೊಲೀಸ್ ಠಾಣೆ ಮೊ.ಸಂ.149/2023 ಕಲಂ 120(ಬಿ), 121(ಎ), 121, 122 ಐಪಿಸಿ, ಕಲಂ 13, 18 ಯುಎಪಿ ಆಕ್ಟ್ & ಕಲಂ 25(3) ಆರ್ಮ್ಸ್ ಆಕ್ಟ್ ರೀತ್ಯಾ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿತ್ತು.

- ಈ ಪ್ರಕರಣದ ತನಿಖೆಯನ್ನು ಪ್ರಧಾನ ಕಛೇರಿಯ ಪತ್ರ ಸಂಖ್ಯೆ ಕಾ&ಸು/ಟಿಎಸ್‌ಸಿ-2/ 40/2023-24 ದಿನಾಂಕ 02.11.2023 ರ ಸೂಚನೆಯಂತೆ ಎನ್‌ಐಎ ತನಿಖೆಗೆ ವರ್ಗಾಯಿಸಲಾಗಿತ್ತು. ಎನ್‌ಐಎ ಅಧಿಕಾರಿಗಳು ಈ ಪ್ರಕರಣದಲ್ಲಿ ಈಗಾಗಲೇ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ.

- ತಲೆ ಮರೆಸಿಕೊಂಡಿರುವ ಎ-2 ಆರೋಪಿ ಜುನೇದ್ ಈತನು 2020 ರಿಂದ ಆರ್.ಟಿ ನಗರ ಪೊಲೀಸ್ ಠಾಣೆಯ ರೌಡಿಪಟ್ಟಿ ಆಸಾಮಿಯಾಗಿದ್ದು, ಈತನು 2020 ರಿಂದಲೂ ತಲೆ ಮರೆಸಿಕೊಂಡಿದ್ದು, ಒಂದು ಕೊಲೆ ಪ್ರಕರಣ ಸೇರಿ 05 ಪ್ರಕರಣಗಳಲ್ಲಿ ಆರೋಪಿಯಾಗಿರುತ್ತಾನೆ.

150ನೇ ಕ್ರ
ದಿ=72
ಸ: 157



- ಬಂಧಿತರುಗಳಲ್ಲಿ ಎ-3, ಎ-4, ಮತ್ತು ಎ-7 ಈ ಮೂರು ಜನರು ಈ ಹಿಂದೆ ಆರ್. ಟಿ ನಗರ ಪೊಲೀಸ್ ಠಾಣೆಯ ಮೊ.ಸಂ.291/2017 ಕಲಂ 143, 147, 148, 363, 307, 302 ರೆ/ವಿ 149 ಐಪಿಸಿ, ಸಂಜಯನಗರ ಪೊಲೀಸ್ ಠಾಣೆ ಮೊ.ಸಂ.54/2019 ಕಲಂ 335, 427, 279 ರೆ:ವಿ 34 ಐಪಿಸಿ ಮತ್ತು ಸಂಜಯನಗರ ಪೊಲೀಸ್ ಠಾಣೆ 55/2019 ಕಲಂ 392, 397 ಐಪಿಸಿ, ಪ್ರಕರಣಗಳಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾಗ, ಎ-5 ಮತ್ತು ಎ-6 ಇಬ್ಬರು ಆರ್.ಟಿ ನಗರ ಮೊ.ಸಂ 291/2017 ಕಲಂ 143, 147, 148, 363, 307, 302 ರೆ/ವಿ 149 ಐಪಿಸಿ ಕೇಸಿನಲ್ಲಿ ದಸ್ತಗಿರಿಯಾಗಿ ಜೈಲಿನಲ್ಲಿದ್ದ ಸಂದರ್ಭದಲ್ಲಿ ಜೈಲಿನಲ್ಲಿದ್ದ ಉಗ್ರರ ಸಂಪರ್ಕಕ್ಕೆ ಬಂದು, ಅವರಿಂದ ಪ್ರಚೋದಿತರಾಗಿ, ದುಷ್ಕೃತ್ಯಕ್ಕೆ ಸಂಚು ರೂಪಿಸಿದ್ದರೆಂಬದು ತನಿಖೆಯಿಂದ ತಿಳಿದು ಬಂದಿರುತ್ತದೆ. ಬಂಧಿತ ಆರೋಪಿಗಳನ್ನು ಹಾಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಶೇಷ ಭದ್ರತೆಯಲ್ಲಿ ಇಡಲಾಗಿದೆ.

- ಹಾಲಿ ರಾಜ್ಯದ ಕಾರಾಗೃಹಗಳಲ್ಲಿ ವಿವಿಧ ಪ್ರಕರಣಗಳಲ್ಲಿ ದಾಖಲಾಗಿರುವ ಬಂದಿಗಳಲ್ಲಿ ಉಗ್ರಗಾಮಿಗಳು, ರೂಢಾಪರಾಧಿಗಳು ಹಾಗೂ ಇನ್ನಿತರೆ ಕುಖ್ಯಾತ ಆರೋಪಿ ಬಂದಿಗಳನ್ನು ಇತರೆ ಬಂದಿಗಳಿಂದ ಬೇರ್ಪಡಿಸಿ ಪ್ರತ್ಯೇಕ ಕೊಠಡಿಗಳಲ್ಲಿ ಬಂಧಿಸಿಡಲಾಗಿರುತ್ತದೆ.

- ಉಗ್ರಗಾಮಿಗಳು, ರೂಢಾಪರಾಧಿಗಳು ಹಾಗೂ ಇನ್ನಿತರೆ ಕುಖ್ಯಾತ ಆರೋಪಿಗಳನ್ನು ಬಂಧಿಸಿಡುವ ಸಲುವಾಗಿ ಪ್ರಸ್ತುತ ಬೆಂಗಳೂರು ಕೇಂದ್ರ ಕಾರಾಗೃಹದ ಆವರಣದಲ್ಲಿ ನೂತನ ಗರಿಷ್ಠ ಭದ್ರತಾ ಕೇಂದ್ರ ಕಾರಾಗೃಹ (High Security Prison) ನಿರ್ಮಾಣ ಮಾಡಲಾಗುತ್ತಿದೆ. ಮೇಲ್ಕಂಡ ಕಾಮಗಾರಿಯ ಮೊತ್ತ ರೂ.10000.00 ಲಕ್ಷಗಳನ್ನು ಈಗಾಗಲೇ ಬಿಡುಗಡೆಗೊಳಿಸಲಾಗಿದ್ದು, ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

- ಮುಂದುವರೆದು, ಕೇಂದ್ರ ಗೃಹ ಮಂತ್ರಾಲಯವು ಕಾರಾಗೃಹಗಳ ಆಧುನೀಕರಣ ಯೋಜನೆಯ ಆರ್ಥಿಕ ನೆರವಿನಡಿಯಲ್ಲಿ ಕರ್ನಾಟಕ ರಾಜ್ಯದ ಶಿವಮೊಗ್ಗದಲ್ಲಿ 280 ಬಂದಿಗಳ ಸಾಮರ್ಥ್ಯದ ನೂತನ ಗರಿಷ್ಠ ಭದ್ರತಾ ಕೇಂದ್ರ ಕಾರಾಗೃಹ (High Security Prison) ನಿರ್ಮಾಣಕ್ಕೆ ರೂ.80.00 ಕೋಟಿಗಳ ಅನುದಾನವನ್ನು ಒದಗಿಸಿದ್ದು, ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 159 ಪಿಆರ್‌ಎ 2022 ದಿನಾಂಕ:28.12.2023 ಮತ್ತು 19.01.2024ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ. ಅದರನ್ವಯ ಕೇಂದ್ರ ಗೃಹ ಮಂತ್ರಾಲಯವು ಕಾರಾಗೃಹಗಳ ಆಧುನೀಕರಣ ಯೋಜನೆಯ ಆರ್ಥಿಕ ನೆರವಿನಡಿಯಲ್ಲಿ ಈಗಾಗಲೇ ಒದಗಿಸಿರುವ ರೂ.10.00 ಕೋಟಿಗಳ ಅನುದಾನವನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ರವರಿಗೆ ಠೇವಣಿಗೊಳಿಸಲು ಕ್ರಮ ವಹಿಸಲಾಗಿದೆ.

ಹೆಚ್‌ಡಿ 22 ಎಸ್‌ಡಿಎನ್ 2023

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು